# ದುನಿಯಾದಲ್ಲಿ ಮಕ್ಕಳ ಕಾಲ



ನಟ ದುನಿಯಾ ವಿಜಿ ಹೆಣ್ಣುಮಕ್ಕಳು ಕೂಡ ಅಪ್ಪನ ಹಾದಿಯಲ್ಲಿ ಹೆಜ್ಜೆ ಇರಿಸಿದ್ದು, ಸಿನಿಮಾರಂಗಕ್ಕೆ ಬರಲು ಎಲ್ಲಾ ತಯಾರಿಯನ್ನೂ ಮಾಡಿಕೊಳ್ಳುತ್ತಿದ್ದಾರೆ.

ಈಚೆಗೆ ದುನಿಯಾ ವಿಜಿ ತಮ್ಮ ಹೆಣ್ಣುಮಕ್ಕಳೊಂದಿಗಿದ್ದ ಫೋಟೊವೊಂದು ಜಾಲತಾಣದಲ್ಲಿ ಕಾಣಿಸಿಕೊಂಡಿದ್ದು, ಮಕ್ಕಳಾದ ಮೋನಿಕಾ ಹಾಗೂ ಮೋನಿಶಾ ಶೀಘ್ರವೇ ಬೆಳ್ಳಿತೆರೆಗೆ ಬರಲು ಸಜ್ಜಾಗುತ್ತಿರುವುದಾಗಿ ದುನಿಯಾ ವಿಜಿ ತಿಳಿಸಿದ್ದಾರೆ.

‘ಸಿನಿಮಾರಂಗಕ್ಕೆ ಬರಲು ನನ್ನ ಮಕ್ಕಳು ತಯಾರಾಗುತ್ತಿದ್ದಾರೆ. ನನ್ನ ಮಗಳು ಮೋನಿಕಾ ಮುಂಬೈನಲ್ಲಿ ನಟನಾ ತರಬೇತಿ ಮುಗಿಸಿ ಈಗ ರಂಗಭೂಮಿಯಲ್ಲಿ ತೊಡಗಿದ್ದಾಳೆ. ಅವಳು ಸಿನಿಮಾಗೆ ಬರುವ ಕುರಿತು ಶೀಘ್ರದಲ್ಲೇ ಘೋಷಣೆ ಮಾಡುವೆ. ನನ್ನ ಬಳಿ ಸುಂದರ ಸ್ಕ್ರಿಪ್ಟ್ ಇದೆ. ಚಿಕ್ಕ ಮಗಳು ಮೋನಿಶಾಗೂ ಸಿನಿಮಾ ಆಫರ್‌ಗಳು ಬರುತ್ತಿವೆ. ಅವಳು ಸದ್ಯ ನ್ಯೂಯಾರ್ಕ್ ಫಿಲ್ಮ್ ಅಕಾಡೆಮಿಗೆ ಹೋಗುತ್ತಿದ್ದಾಳೆ. ಅವಳು ಹಿಂದಿರುಗುತ್ತಿದ್ದಂತೆ, ಅವಳನ್ನೂ ಸಿನಿಮಾರಂಗಕ್ಕೆ ಪರಿಚಯಿಸಲಾಗುವುದು’ ಎಂದು ಹೇಳಿದ್ದಾರೆ.

ತಮ್ಮ ಮಕ್ಕಳು ಎಂಥ ಪಾತ್ರಗಳನ್ನು ನಿರ್ವಹಿಸಬೇಕು ಎಂಬ ನಿರೀಕ್ಷೆಯನ್ನೂ ವ್ಯಕ್ತಪಡಿಸಿದ್ದಾರೆ. ‘ಸಿನಿಮಾಗೆ ಬೆನ್ನೆಲುಬಾಗಿರುವಂಥ ಪಾತ್ರಗಳನ್ನು ನನ್ನ ಮಕ್ಕಳು ನಿರ್ವಹಿಸಬೇಕೆಂದು ಬಯಸುತ್ತೇನೆ. ಗ್ಲಾಮರ್ ಗೊಂಬೆಯಂತೆ ಬಂದು, ಎರಡು ಹಾಡುಗಳಲ್ಲಿ ಮಿಂಚಿ ಒಂದೆರಡು ಮಾತನಾಡಿ ಹೋಗುವ ಪಾತ್ರದಲ್ಲಿ ಕಾಣಿಸಿಕೊಳ್ಳುವುದರಲ್ಲಿ ಯಾವುದೇ ಅರ್ಥವಿಲ್ಲ. ಹೀಗೆ ಒಮ್ಮೆ ಗ್ಲಾಮ್ ಹಾಡುಗಳಲ್ಲಿ ಕಾಣಿಸಿಕೊಳ್ಳಲು ಶುರು ಮಾಡಿದರೆ, ಪದೇ ಪದೇ ಅದೇ ದಾರಿಗೆ ಹೊರಳುವಂತಾಗುತ್ತದೆ. ಅಂಥ ಪಾತ್ರಗಳ ಹೊರತಾಗಿ ನಟನಾ ಆಧಾರಿತ ಸಿನಿಮಾಗಳಲ್ಲಿ ತೊಡಗಿಕೊಳ್ಳಬೇಕು’ ಎಂದಿದ್ದಾರೆ.

‘ಇಲ್ಲಿ ಎರಡನೇ ಚಾನ್ಸ್ ಇರುವುದಿಲ್ಲ. ಪ್ರೇಕ್ಷಕರನ್ನು ಇಂಪ್ರೆಸ್ ಮಾಡಲು ಮೊದಲ ಸಿನಿಮಾ ಅತ್ಯುತ್ತಮ ಅವಕಾಶ. ಅದನ್ನು ಸಮರ್ಥವಾಗಿ ಬಳಸಿಕೊಳ್ಳಿ’ ಎಂದು ತಮ್ಮ ಮಕ್ಕಳಿಗೆ ಸಲಹೆಯನ್ನೂ ನೀಡಿದ್ದಾರೆ.

# ದಿಗಂತ್ ನಿರೂಪ್ ಸಿನಿ ಸಖ್ಯ



‘ನನ್ನ ಹಾಗೂ ದಿಗಂತ್ ಮಧ್ಯೆ ಸಿನಿಮಾ ಹೊರತಾಗಿಯೂ ಮಾತನಾಡಲು
ಸಾಹಸ, ಖಗೋಳ, ಅಪರಾಧ... ಹೀಗೆ ಹಲವು ವಿಷಯಗಳಿವೆ. ದಿಗಂತ್
ಜೊತೆಗಿರುವ ಆ ಸಖ್ಯವೇ ನನ್ನನ್ನು ಈ ಸಿನಿಮಾ ಮಾಡಲು ಒಪ್ಪಿಸಿದೆ...’
ಎಂದಿದ್ದಾರೆ ನಟ ನಿರೂಪ್ ಭಂಡಾರಿ.

ನಟ ದಿಗಂತ್ ಮಂಚಾಲೆ ಅಭಿನಯದ ‘ಎಡಗೈ ಅಪಘಾತಕ್ಕೆ ಕಾರಣ’
ಸಿನಿಮಾದಲ್ಲಿ ನಟ ನಿರೂಪ್ ಭಂಡಾರಿ ಕೂಡ ಕಾಣಿಸಿಕೊಳ್ಳುತ್ತಿದ್ದು, ಅತಿಥಿ
ಪಾತ್ರಕ್ಕೆ ಅವರು ಬಣ್ಣ ಹಚ್ಚಿದ್ದಾರೆ. ಈ ಸಿನಿಮಾದಲ್ಲಿನ ತಮ್ಮ ಪಾತ್ರದ
ಕುರಿತು ಹೇಳುತ್ತಾ, ತಮ್ಮ ಹಾಗೂ ದಿಗಂತ್ ನಡುವಿನ ಗೆಳೆತನದ ಕುರಿತು
ಕೂಡ ಮಾತು ಹಂಚಿಕೊಂಡಿದ್ದಾರೆ.

‘ಈ ಸಿನಿಮಾವನ್ನು ಒಪ್ಪಿಕೊಳ್ಳಲು ದಿಗಂತ್ ಪ್ರಮುಖ ಕಾರಣ. ದಿಗಂತ್
ಕಾಮಿಡಿ ಟೈಮಿಂಗ್‌ಗೆ ನಾನು ಆಗಿನಿಂದಲೂ ಅಭಿಮಾನಿ. ನನ್ನ ಸ್ನೇಹಿತರಲ್ಲಿ
ಕೆಲವರಿಗೆ ದಿಗಂತ್ ಕ್ರಶ್ ಆಗಿದ್ದರು. ದಿಗಂತ್ ಅವರ ಮೊದಲ ಚಿತ್ರ
‘ಮಿಸ್ ಕ್ಯಾಲಿಫೋರ್ನಿಯಾ’ದಿಂದ ಹಿಡಿದು ಇಲ್ಲಿವರೆಗೂ ಅವರ ಸಿನಿಮಾ
ನೋಡುವ ಮಂದಿಯಲ್ಲಿ ನಾನೂ ಒಬ್ಬ’ ಎಂದು ಹೇಳಿದ್ದಾರೆ.

‘ನನ್ನ ಪಾತ್ರ ಸಿನಿಮಾದಲ್ಲಿ ಎಷ್ಟು ಪ್ರಮುಖ ಎಂಬುದನ್ನು ದಿಗಂತ್
ಹೇಳಿದರು. ನಾನು ಮರು ಯೋಚಿಸದೇ ಒಪ್ಪಿಗೆ ಸೂಚಿಸಿದೆ. ದಿಗಂತ್
ಹಾಗೂ ನಾನು ಮಾತಾಡುವಾಗ, ಹಲವು ವಿಷಯಗಳಲ್ಲಿ ನಮ್ಮ
ಆಲೋಚನೆ ಒಂದೇ ರೀತಿ ಇರುತ್ತದೆ. ಒಮ್ಮೆ ಮಾತಿಗೆ ಇಳಿದರೆ, ಏನೇನು
ಸಾಧ್ಯವೋ ಅದೆಲ್ಲವನ್ನೂ ಮಾತಾಡಿರುತ್ತೇವೆ’ ಎಂದಿದ್ದಾರೆ. ■